# ರಣ್‌ವೀರ್, ಕಪಿಲ್ ಮತ್ತು ಓಶೋ





ಬಾಲಿವುಡ್‌ನಲ್ಲಿ ನಿಜಜೀವನದ ಘಟನೆಗಳ, ವ್ಯಕ್ತಿಗಳ ಕುರಿತು ಸಿನಿಮಾ ಮಾಡುವವರ ಸಂಖ್ಯೆಯೂ ಹೆಚ್ಚುತ್ತಿದೆ. ನಿರ್ದೇಶಕ ಕಬೀರ್ ಖಾನ್ ಮುಂದಿನ ಚಿತ್ರ ವೂ ಇದೇ ಮಾದರಿಯದ್ದು. 1983ರಲ್ಲಿ ಮೊದಲ ಬಾರಿಗೆ ವಿಶ್ವಕಪ್ ಕ್ರಿಕೆಟ್ ಟ್ರೋಫಿ ಗೆದ್ದ ಭಾರತದ ತಂಡದ ನಾಯಕ ಕಪಿಲ್ ದೇವ್ ಜೀವನಕಥೆ ಆಧರಿಸಿ ಈ ಹೊಸ ಸಿನಿಮಾದ ಚಿತ್ರಕಥೆ ಹೆಣೆಯಲಾಗಿದೆ. ಚಿತ್ರದ ಟೈಟಲ್ '83' ಎಂದೇ ಇಡಲಾಗಿದೆ.

ಈ ಚಿತ್ರದಲ್ಲಿ ಕಪಿಲ್ ಪಾತ್ರ ವಹಿಸುವಾತ ರಣ್‌ವೀರ್ ಸಿಂಗ್. ಖಿಲ್ಜಿ ಪಾತ್ರದಲ್ಲಿ ಅದ್ಭುತ ಯಶಸ್ಸು ಪಡೆದಿರುವ ರಣ್‌ವೀರ್ ಸಿಂಗ್, ಈ ಹೊಸ ಪಾತ್ರದ ಬಗ್ಗೆ ತುಂಬು ಉತ್ಸಾಹದಲ್ಲಿದ್ದಾನೆ. ಈ ಚಿತ್ರದಲ್ಲಿ ಕಪಿಲ್ ಕುರಿತು ವಿವರ ಸಂಗ್ರಹಿಸಲು 1983ರಲ್ಲಿ ವಿಶ್ವಕಪ್ ಗೆದ್ದ ಅಷ್ಟೂ ಆಟಗಾರರ ಜತೆಗೆ ರಣ್‌ವೀರ್ ಮಾತನಾಡಲಿದ್ದಾನಂತೆ. ಜತೆಗೆ ಚಿತ್ರತಂಡವು, ಆಗ ಕ್ರಿಕೆಟ್ ತಂಡದಲ್ಲಿ ಇದ್ದ ಎಲ್ಲ ಸಿಬ್ಬಂದಿಯ ನೆರವನ್ನೂ ಪಡೆಯಲಿದೆಯಂತೆ. ಚಿತ್ರ 2019ರ ಆಗಸ್ಟ್‌ನಲ್ಲಿ ಬಿಡುಗಡೆ ಆಗಲಿದೆಯಂತೆ.

ರಣ್‌ವೀರ್ ಸಿಂಗ್ ಎಂತಹ ಪಾತ್ರಗಳಿಗೂ ಜೀವ ತುಂಬಬಲ್ಲ ನಟ ಎನ್ನುವುದು ಬಾಲಿವುಡ್‌ಗೆ ಖಚಿತವಾದಂತಿದೆ. ಅದಕ್ಕೆಂದೇ ಆತನನ್ನು ಜೀವನ ಚರಿತ್ರೆ ಆಧರಿತ ಕಥೆಗಳೇ ಹುಡುಕಿಕೊಂಡು ಬರುತ್ತಿವೆ. ಕಪಿಲ್‌ದೇವ್ ಕುರಿತ ಚಿತ್ರದ ಬೆನ್ನಲ್ಲೇ ರಣ್‌ವೀರ್ ಅಭಿನಯಿಸಲಿರುವ ಇನ್ನೊಂದು ಚಿತ್ರ ವಿವಾದಾತ್ಮಕ ಗುರು ರಜನೀಶ್ ಜೀವನ ಚರಿತ್ರೆ ಆಧರಿಸಿದ್ದು. ಕಳೆದ ಶತಮಾನದ 70ರ ದಶಕದಲ್ಲಿ ಭಾರತ ಮತ್ತು ಅಮೆರಿಕದಲ್ಲಿ ಲಕ್ಷಾಂತರ ಅನುಯಾಯಿಗಳನ್ನು ಹೊಂದಿ ಪ್ರಖ್ಯಾತರಾಗಿದ್ದವರು ರಜೀಶ್ ಯಾನೆ ಓಶೊ. ಪುಣೆಯ ಓಶೊ ಆಶ್ರಮಕ್ಕೆ ಬಾಲಿವುಡ್‌ನ ಹಲವು ಹೀರೋ, ಹೀರೋಯಿನ್ ಮತ್ತು ನಿರ್ದೇಶಕರು ಭೇಟಿ ಕೊಡುವುದು ಸಾಮಾನ್ಯವಾಗಿತ್ತು.

ಬಾಲಿವುಡ್‌ನ ಖ್ಯಾತ ನಿರ್ದೇಶಕ ಮಹೇಶ್ ಭಟ್, ನಟಿ ಪರ್ವೀನ್ ಬಾಬಿ, ಇತ್ತೀಚೆಗೆ ನಿಧನರಾದ ವಿನೋದ್ ಖನ್ನಾ ಮುಂತಾದವರು ರಜನೀಶ್ ಅವರ ಭಕ್ತರಾಗಿದ್ದರು.

ಓಶೋ ಜೀವನಚರಿತ್ರೆ ಆಧರಿಸಿದ ಹೊಸ ಚಿತ್ರವನ್ನು ಕರಣ್ ಜೋಹರ್ ಅವರ ಧರ್ಮ ಪ್ರೊಡಕ್ಷನ್ಸ್ ನಿರ್ಮಿಸಲು ಮುಂದಾಗಿದೆ. ಓಶೋ ಪಾತ್ರಕ್ಕೆ ರಣ್‌ವೀರ್‌ಸಿಂಗ್ ಅವರೇ ಸೂಕ್ತ ಆಯ್ಕೆ ಎಂದು ಕರಣ್ ಜೋಹರ್ ನಿರ್ಧರಿಸಿದ್ದಾರಂತೆ. ಕಪೂರ್ ಅಂಡ್ ಸನ್ಸ್ ಸಿನಿಮಾ ನಿರ್ದೇಶಿಸಿದ್ದ ಶಕುನ್ ಬಾತ್ರಾ ಈ ಚಿತ್ರವನ್ನು ನಿರ್ದೇಶಿಸಲಿದ್ದಾರೆ.